
# ಮಹಾಸಂತೆಯೊಳಗಿನ ಶಬ್ದಗಳು



■ ಸುಶೀಲಾ ಆರ್.ರಾವ್

ಬದುಕು ಅರಳಿಕೊಳ್ಳುವುದೇ ಜನನದಿಂದ. ಅದೇ ಮೊದಲ ಬಿಂದು. ಅಲ್ಲಿಂದಲೇ ಜೀವಗಳಿಗೆ ಶಬ್ದಗಳ ಸಾಂಗತ್ಯದ ನೇರ ಆರಂಭ. ಕತ್ತಲ ಗರ್ಭದಿಂದ ಹೊರಬಂದ ಶಿಶುವು ಸುತ್ತಲಿನ ಶಬ್ದಗಳು, ಬೆಳಕು, ಅಪರಿಚಿತರು– ಹೀಗೆ ವಿಭಿನ್ನತೆಗಳಿರುವ ಹೊಸ ವಲಯದ ಹೊಸಗಾಳಿ ಸೇವಿಸುತ್ತಲೇ ಮೊದಲ ಸ್ಪಂದನವಾಗಿ ಅಳುವಿಗೆ ತೊಡಗುತ್ತದೆ. ಈ ಅಳುವಿನ ಸದ್ದಿನೊಂದಿಗೆ ಸುತ್ತಲಿನ ಇತರ ಸದ್ದುಗಳು, ಸ್ಪರ್ಶ, ಅದನ್ನು ನೀಡಿದವರು, ಹಾಲುಣಿಸಿದವರು ಹೀಗೆ ಕ್ರಮೇಣ ಇವೆಲ್ಲವೂ ಪರಿಚಿತವೆನಿಸುತ್ತದೆ ಮಗುವಿಗೆ. ಮಗುವು ಬೆಳೆದಂತೆ ಪರಿಸರದ ವಿಭಿನ್ನ ಶಬ್ದಗಳೇ ನಿತ್ಯ ಒಡನಾಡಿಯಾಗಿ ಬದುಕಿನ ಮಿಡಿತದೊಂದಿಗೆ ಹಿತವಾಗಿ ಸಾಗುತ್ತವೆ. ಮುಂದೆ ನುಡಿ ಅಥವಾ ಮಾತು ಬದುಕನ್ನು ತೆಕ್ಕೆಗೆ ಸೆಳೆದುಕೊಳ್ಳುತ್ತ ಮುನ್ನಡೆಸುತ್ತದೆ.

'ನುಡಿದರೆ ಮುತ್ತಿನ ಹಾರದಂತಿರಬೇಕು... ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು...' ಎಂಬುದು ಖ್ಯಾತ ವಚನವೊಂದರ ಸೊಲ್ಲು. ಹಾಗೆಯೇ 'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ... ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು...' ಎಂದು ತಿಳಿ ಹೇಳುತ್ತದೆ ಮತ್ತೊಂದು ವಚನ. ಈ ಲೋಕವು ಒಂದು ಮಹಾ ಸಂತೆಯೇ. ಮಾರಾಟದ ಕೇಂದ್ರವಾದ ಸಂತೆಗೆ ಹೋಗದವರೂ ಈ ಮಹಾ ಲೋಕ ಸಂತೆಯನ್ನು ಬಿಡಲಾಗದೆ ವಾಸ ಇರಬೇಕಾದ್ದೇ. ಇದೇ ನಮ್ಮೆಲ್ಲರ ನಿಜವಾದ ಠಾವು. ಈ ನಿತ್ಯಸಂತೆಯೊಳಗೆ ನಮ್ಮ ಮನ ಮಾಲಿನ್ಯಕ್ಕೆ ಅಂದರೆ ಅಶಾಂತಿಗೆ ಕಾರಣವಾಗುವ ಶಬ್ದಗಳೆಂದರೆ ಇತರರ ವ್ಯಂಗ್ಯ, ಕುಹಕ, ಟೀಕೆ, ಬೈಗಳು, ಟೊಳ್ಳು ನುಡಿಗಳು ಇತ್ಯಾದಿ. ಆಗೀಗಿನ ಮೈಕಾಸುರನ ಆರ್ಭಟದಲ್ಲಿನ ಹಾಡು, ಭಾಷಣಾದಿ ಅಕಾಲಿಕವಾಗಿದ್ದು ನಮಗೆ ಭೀಷಣ, ಅಸಹನೀಯ ಅನಿಸುವುದಾದರೆ ಸಮೀಪದವರ ಬೇಡದ ಕಟುಮಾತುಗಳು ನಮ್ಮ ಪಾಲಿಗೆ ಶಬ್ದ ಮಾಲಿನ್ಯವೇ. ಅವು ಬಿಸಿತುಪ್ಪದಂತೆ ಉಗುಳಲೂ ನುಂಗಲೂ ಆಗದೆ ನಮ್ಮೊಳಗೆ ಕೋಪ, ಅಶಾಂತಿಗಳನ್ನು ಹುಟ್ಟು ಹಾಕುತ್ತವೆ. ಸಂಬಂಧಗಳನ್ನು ಹಾಳುಗೆಡವಬಲ್ಲವು.

**'Patinence is the companion of wisdom'** ಹೇಳಿಕೆ ಸ್ಯೆಂಟ್ ಆಗಸ್ಟಿನ್ ಎಂಬಾತನದು. ಅವರವರ ಮಾತಿನ ಧಾಟಿ ಅವರವರದೇ ವೈಖರಿ. ಕೆಲವೊಮ್ಮೆ ಜಾಣ್ಮೆ, ತಾಳ್ಮೆ ಜತೆಗೂಡಿಸಿಕೊಂಡು ಪರಿಸ್ಥಿತಿಯನ್ನು ನಿಭಾಯಿಸಬೇಕಾಗುತ್ತದೆ. ಸದಾ ಪ್ರಸನ್ನ, ಪ್ರಶಾಂತ ಮನೋಭಾವ ರೂಢಿಸಿಕೊಂಡರೆ ಒಳಿತು.

ಯಾವುದೇ ಖಾರ, ಕಹಿ, ಒರಟು ನುಡಿಗಳಿಗೆ ಆಸ್ಪದ ಕೊಡದಂತೆ ಸ್ವಯಂ ಕಡಿವಾಣಧಾರಿಗಳಾಗುವುದು ಅವರವರ ಬದುಕಿನ ಕೈ ಎಟಕು ಆಗಬಾರದೇಕೆ? ಈ ಬಗ್ಗೆ ಸ್ವಚಿಂತನೆ ಸಾಗಬೇಕಷ್ಟೇ.

ಅನಗತ್ಯ ಪರಿಹಾಸ್ಯ, ಅಪಹಾಸ್ಯದ ನುಡಿಗಳು ಕೆಲವೊಮ್ಮೆ ಕೆಲವರ ಅಸ್ತ್ರವಾಗಿರುತ್ತದೆ. ಇಂತಹ ಕೀಳು ಮಾತುಗಳನ್ನು ಉರುಳಿಸುತ್ತ ವಿಕೃತಾನಂದ ಪಡೆಯುವವರೂ ಇಲ್ಲದಿಲ್ಲ. ಇದು ಕೇಳುಗರ ಮನೋಮಾಲಿನ್ಯವೆಂಬ ಅಶಾಂತಿಗೆ ಕಾರಣವಾಗುವುದರಲ್ಲಿ ಸಂಶಯವಿಲ್ಲ.

ನಾನು ಗಮನಿಸಿದ ಪ್ರಸಂಗವೊಂದು ಹೀಗಿದೆ. ಅಂದು ಬಂಧುಗಳ ಸಮಾರಂಭವೊಂದಕ್ಕೆ ಹೋಗಿದ್ದೆ. ಸುಂದರ ಪುಟ್ಟಿಗೊಂದು ಚಂದದ ಹೆಸರಿಡುವ ನಾಮಕರಣ ಸಮಾರಂಭವದು. ಒಂಟಿಯಾಗಿ ಹೋಗಿದ್ದ ನಾನು, ಬಾಗಿಲಲ್ಲೇ ಸಿಕ್ಕ ಒಬ್ಬಿಬ್ಬರು ಪರಿಚಿತರೊಂದಿಗೆ ಮಾತನಾಡುತ್ತ ಹಾಗೆಯೇ ಸಾಗಿ, ಒಳ ಬಂದು ಸಭಾಂಗಣದಲ್ಲಿನ ಒಂದು ಕುರ್ಚಿ ಹಿಡಿದು ಕುಳಿತಿದ್ದೆ. ನನ್ನ ಕಣ್ಣು ಕ್ಯಾಮರಾ, ಕಿವಿ ಟೇಪ್ ರೆಕಾರ್ಡರ್ ಆಗಿದ್ದವು.

ಸ್ವಲ್ಪ ಹೊತ್ತು.... ಒಂದೈದಾರು ನಿಮಿಷ ಕಳೆದಿರಬಹುದು. ಹಿಂದಿನಿಂದ ಯಾರೋ ಹೆಂಗಸರಿಬ್ಬರ ಮೆಲುಧ್ವನಿಯ ಸಂಭಾಷಣೆ ಕಿವಿ ತುಂಬತೊಡಗಿತು.

'ಇವತ್ತೇನು ನೀನು ಒಬ್ಳೇ ಬಂದದ್ದು?.... ನಿನ್ನ ಜಂಬದ ಕೋಳಿ ಬರ್ಲಿಲ್ವಾ?'

'ಇಲ್ಲ... ... ನಾನೊಬ್ಳೇ... ಅವ್ರ ಮನೆಗೆ ಯಾರೋ ನೆಂಟ್ರು ಬಂದಿದ್ದಾರೆ... ಬರೋದಿಲ್ಲ ಅಂದ್ಲು... ಹಾಗೆ ನಾನು ಮಾತ್ರ...' ಕಿಲ ಕಿಲ ನಗು ಸಹಿತ.

ಮುಂದೆ ಅವರ ಮಾತು ಮೆಲುಧ್ವನಿಗೆ ಇಳಿದಿತ್ತು. ಎದುರಿಗೆ ವಾದ್ಯಗಳ ಸುನಾದದ ಅಬ್ಬರ ಬೇರೆ!... ಆದರೆ ಅಷ್ಟರಲ್ಲಾಗಲೇ ವಿಶೇಷ ಶಬ್ದವೊಂದನ್ನು ನನ್ನ ಕಿವಿಗಳು ಸೆರೆ ಹಿಡಿದಿದ್ದವು.... 'ಜಂಬದ ಕೋಳಿ'!

ಸುಂದರ ಅಲಂಕೃತ ವೇದಿಕೆಯಲ್ಲಿ ನಾಮಕರಣ ಸಮಾರಂಭದ ವಿಧಿ ವಿಧಾನಗಳು ಸಾಂಗವಾಗಿ ಸಾಗುತ್ತ ಸಂಪನ್ನಗೊಂಡಿತು. ಜತೆಯಲ್ಲೇ, ವೇದಿಕೆಯ ಬದಿಗೆ ಉಡುಗೊರೆಗಳ ರಾಶಿಯೊಂದು ಉದ್ಭವವಾಯಿತು.